ವಾಚ್ ತೋರಿಸಿ, ಪೇಮೆಂಟ್ ಮಾಡಿ!

■ ಶಶಿಕುಮಾರ್ ಸಿ.

ಆ್ಯಪ್ ಮೂಲಕ ಹಣ ಪಾವತಿ ಮಾಡುವುದು ಡಿಜಿಟಲ್ ಪೇಮೆಂಟ್ ಕ್ಷೇತ್ರದಲ್ಲಿ ಈಗ ಹಳೆಯ ವಿಷಯ. ಹೊಸ ವಿಷಯ ಏನಿರಬಹುದು? ಈ ಪ್ರಶ್ನೆಗೆ ಉತ್ತರ – ಕಾಂಟ್ಯಾಕ್ಟ್‌ಲೆಸ್ ಪೇಮೆಂಟ್ ವಾಚ್‌ಗಳು.

ಹೌದು, ಟೈಟಾನ್ ವಾಚ್ ತಯಾರಿಕೆ ಸಂಸ್ಥೆ, 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ'ದ ಸಹಯೋಗದೊಂದಿಗೆ ಸ್ಮಾರ್ಟ್ ಫೀಚರ್ಸ್ ಒಳಗೊಂಡ ಐದು ಬಗೆಯ ಹೊಸ ಮಾದರಿಯ ವಾಚ್‌ಗಳನ್ನು ದೇಶದಲ್ಲಿ ಮೊದಲ ಬಾರಿಗೆ ಪರಿಚಯಿಸಿದೆ.

ವಾಚ್‌ಗಳ ವಿಶೇಷತೆ

ಫೋನ್ ಮೂಲಕ ಮತ್ತು ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಮೂಲಕ ಪೇಮೆಂಟ್ ಮಾಡುವ ಪದ್ಧತಿ ಈಗಾಗಲೇ ಚಾಲ್ತಿಯಲ್ಲಿದೆ. ಈ ಪ್ರಕ್ರಿಯೆಯೇ ಸರಳವಾದುದು. ಇನ್ನೂ ಸುಲಭವಾಗಿ ಪೇಮೆಂಟ್ ಮಾಡಲು ಹೊಸ ಕಾಂಟ್ಯಾಕ್ಟ್‌ಲೆಸ್ ಪೇಮೆಂಟ್ ವಾಚ್‌ಗಳು ನೆರವು ನೀಡುತ್ತವೆ. ಈ ವಾಚ್‌ಗಳು ಕಾಂಟ್ಯಾಕ್ಟ್‌ಲೆಸ್ ಪೇಮೆಂಟ್ ಸ್ಮಾರ್ಟ್ ಫೀಚರ್ಸ್ ಅನ್ನು ಒಳಗೊಂಡಿದ್ದು, ಅವು POS ಮೂಲಕ ಪೇಮೆಂಟ್ ಮಾಡಲು ಸಹಕರಿಸುತ್ತವೆ.

ಈ ವಾಚ್ ಸ್ಕ್ರಾಪ್ ಒಳಗೆ ನಿಯರ್–ಫೀಲ್ಡ್ ಕಮ್ಯುನಿಕೇಷನ್ (NFC) ಚಿಪ್ ಇದ್ದು, ಇದು ಕಾಂಟ್ಯಾಕ್ಟ್‌ಲೆಸ್ ಪೇಮೆಂಟ್ ಮಾಡಲು ನೆರವು ನೀಡುತ್ತದೆ. ಜೊತೆಗೆ ನೋಡಲು ಇದು ಸಾಮಾನ್ಯ ವಾಚ್‌ನಂತೆ ಕಂಡರೂ ವಿಶೇಷವಾಗಿದೆ.

ಎಸ್‌ಬಿಐ ಖಾತೆದಾರರಿಗೆ ಮಾತ್ರ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ (ಎಸ್‌ಬಿಐ) ಟೈಟಾನ್ ಒಪ್ಪಂದ ಮಾಡಿಕೊಂಡು ಹೊಸ ಮಾದರಿಯ ವಾಚ್‌ಗಳನ್ನು ಹೊರತಂದಿದೆ. ಮೊದಲ ಹಂತವಾಗಿ ಎಸ್‌ಬಿಐ ಖಾತೆದಾರರಿಗೆ ಮಾತ್ರ ಈ ವಾಚ್‌ಗಳ ಬಳಕೆಗೆ ಅವಕಾಶ

ಕಲ್ಪಿಸಲಾಗಿದೆ. ಎಸ್‌ಬಿಐ ಖಾತೆಯೊಂದಿಗೆ ಮಾತ್ರ ಈ ವಾಚ್‌ಗಳು ಸ್ಪಂದಿಸುತ್ತವೆ. ಹೀಗಾಗಿ ಎಸ್‌ಬಿಐ ಬ್ಯಾಂಕ್ ಕಾರ್ಡ್ ಹೊಂದಿರುವ ಬಳಕೆದಾರರು ಮಾತ್ರ ಕಾಂಟ್ಯಾಕ್ಟ್‌ಲೆಸ್ ಪೇಮೆಂಟ್ ಅನ್ನು ಮಾಡಬಹುದಾಗಿರುತ್ತದೆ.

ವಾಚ್‌ಗಳ ಮೂಲಕ ಪೇಮೆಂಟ್ ಮಾಡಲು ಮೊದಲು ಯೊನೊ ಆ್ಯಪ್‌ನೊಂದಿಗೆ ಬಳಕೆದಾರರು ಹೆಸರು ನೋಂದಾಯಿಸಿಕೊಂಡಿರಬೇಕು.

ಪಿನ್‌ಕೋಡ್ ಇಲ್ಲದೆ 2000 ರೂಪಾಯಿವರೆಗೆ ಪೇಮೆಂಟ್ ಮಾಡಬಹುದಾಗಿದೆ. ಒಂದು ವೇಳೆ ಅದಕ್ಕಿಂತ ಹೆಚ್ಚಿನ ಮೊತ್ತದ ಪೇಮೆಂಟ್ ಮಾಡಬೇಕಿದ್ದರೆ ವಾಚ್‌ಗೆ ಪಿನ್ ಅನ್ನು ಮೊದಲೇ ಸೆಟ್ ಮಾಡಿರಬೇಕು. ಪೇಮೆಂಟ್ ವೇಳೆ ಆ ಪಿನ್ ಅನ್ನು ನಮೂದಿಸಿ ಪೇಮೆಂಟ್ ಮಾಡಬಹುದು.

ಹೊಸ ಮಾದರಿಯ ಐದು ವಾಚ್‌ಗಳ ಪೈಕಿ ಮೂರು ವಾಚ್‌ಗಳು ಪುರುಷರಿಗೆ, ಇನ್ನುಳಿದ ಎರಡು ವಾಚ್‌ಗಳು ಮಹಿಳೆಯರಿಗಾಗಿ ವಿನ್ಯಾಸ ಮಾಡಲಾಗಿದೆ. ಇವು ಕ್ಲಾಸಿಕ್ ಬ್ಲ್ಯಾಕ್ ಮತ್ತು ಬ್ರೌನ್ ಲೆದರ್ ಸ್ಟ್ರಾಪ್‌ಗಳನ್ನೊಳಗೊಂಡ ರೌಂಡ್ ಡಯಲ್ ಹೊಂದಿವೆ. ಪುರುಷರ ವಾಚ್‌ಗಳ ಬೆಲೆ ರೂ. 2,995, ರೂ. 3,995 ಹಾಗೂ ರೂ. 5,995 ಬೆಲೆ ಹೊಂದಿವೆ. ಮಹಿಳೆಯರ ವಾಚ್‌ಗಳ ಬೆಲೆ ರೂ. 3,895 ಮತ್ತು ರೂ. 4,395 ಬೆಲೆ ಹೊಂದಿವೆ. ■

ಜೂಮ್ ಭದ್ರತೆ ಇನ್ನಷ್ಟು ಬಿಗಿ

ಜೂಮ್ ವಿಡಿಯೊ ಕಾಲ್ ಅಪ್ಲಿಕೇಷನ್‌ನಲ್ಲಿ ಬಹುತೇಕರು ಭದ್ರತಾ ಲೋಪ ಮತ್ತು ಸಮಸ್ಯೆ ಎದುರಿಸುತ್ತಿರುವ ಆರೋಪ ಎಲ್ಲೆಡೆ ಕೇಳಿ ಬರುತ್ತಿದೆ. ಇದರಿಂದಾಗಿ ಎಚ್ಚೆತ್ತುಕೊಂಡಿರುವ ಜೂಮ್ ಸಂಸ್ಥೆಯು ಆ್ಯಪ್‌ನಲ್ಲಿ ಹೆಚ್ಚುವರಿ ಭದ್ರತಾ ಫೀಚರ್‌ಗಳನ್ನು ಪರಿಚಯಿಸಿದೆ. ಟೂ ಫ್ಯಾಕ್ಟರ್ ಅಥೆಂಟಿಕೇಷನ್ ಸೌಲಭ್ಯವು ಈ ಆ್ಯಪ್‌ನಲ್ಲಿ ಲಭ್ಯವಿದ್ದು, ಎಲ್ಲ ಬಳಕೆದಾರರು ಕೂಡ ಅದನ್ನು ಎನೇಬಲ್ ಮಾಡಿಕೊಂಡು ಬಳಸುವಂತೆ ಜೂಮ್ ಮನವಿ ಮಾಡಿದೆ. ಬಳಕೆದಾರರ ಮಾಹಿತಿ ಮತ್ತು ಲಾಗಿನ್ ವಿವರ ಹಾಗೂ ಮೀಟಿಂಗ್‌ನ ಸುರಕ್ಷತಾ ದೃಷ್ಟಿಯಿಂದಾಗಿ ಟೂ ಫ್ಯಾಕ್ಟರ್ ಅಥೆಂಟಿಕೇಷನ್ ಕಡ್ಡಾಯವಾಗಿ ಆತ್ಯಗತ್ಯ. ಜೂಮ್ ಮೀಟಿಂಗ್‌ಗೆ ಪ್ರವೇಶಿಸಬೇಕಾದರೆ ಒಟಿಪಿ ಲಾಗಿನ್ ಬೇಕಾಗುತ್ತದೆ. ಅಲ್ಲದೆ, ಒಟಿಪಿ ಬದಲು, ಗೂಗಲ್ ಅಥೆಂಟಿಕೇಟರ್, ಮೈಕ್ರೋಸಾಫ್ಟ್ ಅಥೆಂಟಿಕೇಟರ್ ಕೂಡ ಬಳಸಬಹುದಾಗಿದೆ. ಹೇಗೆ?

ಜೂಮ್ ಮೆನು ಅನ್ನು ಕ್ಲಿಕ್ ಮಾಡಿದರೆ ಅಡ್ವಾನ್ಸ್ಡ್ ಆಯ್ಕೆ ಕಾಣುತ್ತದೆ. ಅದನ್ನು ಸೆಲೆಕ್ಟ್ ಮಾಡಿ, ಅದರಲ್ಲಿರುವ ಸೆಕ್ಯುರಿಟಿ ಆಯ್ಕೆಯನ್ನು ಓಪನ್ ಮಾಡಿ. ನಂತರ, ಸೈನ್ ಇನ್ ವಿತ್ ಟೂ ಫ್ಯಾಕ್ಟರ್ ಅಥೆಂಟಿಕೇಷನ್ ಎಂದಿರುವುದನ್ನು ಎನೇಬಲ್ ಮಾಡಿ. ವೈಯಕ್ತಿಕ ವಿಡಿಯೊ ಕಾಲ್ ಮತ್ತು ಮೀಟಿಂಗ್, ಜೂಮ್ ಕಾನ್ಫರೆನ್ಸ್‌ಗೆ ಇದು ಸಹಕಾರಿಯಾಗಿದೆ.

ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ

ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಏಷ್ಟೇ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಜೈಬಾಲಾಜಿ ಜ್ಯೋತಿಷ್ಯಂ

ಬಾಯಂ ಮನೆ ವಿಳಾಸ: ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ಸ್ಟಿಲ್ಯಾಣದ ಪಕ್ಕದಲ್ಲಿ ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕೆಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಹಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.